ಕರ್ನಾಟಕ ವಿಧಾನ ಪರಿಷತ್ತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	504
ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	05.02.2021.
ಉತ್ತರಿಸುವವರು	:	ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರಿನಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳು ಇವೆ; ಇವುಗಳಲ್ಲಿ ಸ್ಥಗಿತಗೊಂಡಿರುವ ಕಾರ್ಖಾನೆಗಳು ಎಷ್ಟು;	ಬೆಂಗಳೂರು ನಗರ ಜಿಲ್ಲೆಯಲ್ಲಿರುವ ನೋಂದಾಯಿತ ಸಣ್ಣ ಕೈಗಾರಿಕೆಗಳ ಸಂಖ್ಯೆ 2,04,726. 2006-07ನೇ ಸಾಲಿನಲ್ಲಿ ಭಾರತ ಸರ್ಕಾರವು ಕೈಗೊಂಡ ಸಮೀಕ್ಷೆಯ ಪ್ರಕಾರ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 14,970 ಕೈಗಾರಿಕೆಗಳು ಸ್ಥಗಿತಗೊಂಡಿರುತ್ತವೆ.
ಆ)	ಇವುಗಳಲ್ಲಿ ರೆಡ್, ಆರೆಂಜ್, ಗ್ರೀನ್ ಝೋನ್‌ಗಳೆಷ್ಟು; (ವಿವರ ನೀಡುವುದು)	ಇಲಾಖೆಯಲ್ಲಿ ಯಾವುದೇ ರೆಡ್, ಆರೆಂಜ್, ಗ್ರೀನ್ ಎಂದು ಝೋನ್‌ಗಳೆಂದು ವಿಭಾಗ ಮಾಡಿರುವುದಿಲ್ಲ. ಆದರೆ, ಮಾಲಿನ್ಯ ನಿಯಂತ್ರಣ ಮಂಡಳಿಯು ಮಾಲಿನ್ಯ ಹೊರಸೂಸುವಂತಹ ಕೈಗಾರಿಕೆಗಳನ್ನು ರೆಡ್, ಆರೆಂಜ್, ಗ್ರೀನ್ ಮತ್ತು ವೈಟ್ ಕ್ಯಾಟಗರಿ ಎಂದು ವರ್ಗೀಕರಿಸಿರುತ್ತದೆ.
ಇ)	ಸ್ಥಗಿತಗೊಂಡಿರುವ ಕಾರ್ಖಾನೆಗಳ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಸಾಲ ಪಡೆದು ಒತ್ತಡದಲ್ಲಿರುವ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಪುನ:ಶ್ಚೇತನಕ್ಕಾಗಿ ಆರ್‌ಬಿಐ ರವರು ಸಂಖ್ಯೆ ಆರ್‌ಬಿಐ/2018-19/203 ದಿನಾಂಕ 7/6/2019 ರಂದು ಬ್ಯಾಂಕುಗಳಿಗೆ ಸುತ್ತೋಲೆ ನೀಡಿದ್ದು ಅದರಂತೆ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿವೆ. ರೋಗಗ್ರಸ್ಥ ಘಟಕಗಳ ಪುನ:ಶ್ಚೇತನಕ್ಕಾಗಿ ಬ್ಯಾಂಕುಗಳು ಕೆಳಕಂಡ ಸವಲತ್ತುಗಳನ್ನು ನೀಡುತ್ತಿವೆ. 1) ಪಡೆದ ಸಾಲದ ಕಂತುಗಳನ್ನು ರೀ ಷೆಡ್ಯೂಲ್ ಮಾಡುವುದು, 2) ಅಗತ್ಯಕ್ಕೆ ಬೇಕಾಗಿರುವ ಹೆಚ್ಚುವರಿ ದುಡಿಮೆ ಬಂಡವಾಳ/ಅವಧಿ ಸಾಲ ನೀಡುವುದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾರವರ ಮಾರ್ಗಸೂಚಿಯಂತೆ ಬ್ಯಾಂಕುಗಳು ತೀವ್ರ ಒತ್ತಡದಲ್ಲಿರುವ 26,892 ರೋಗಗ್ರಸ್ಥ ಕೈಗಾರಿಕೆಗಳನ್ನು ಪುನ:ಶ್ಚೇತನಕ್ಕಾಗಿ ಗುರುತಿಸಿ ಕ್ರಮ ಕೈಗೊಳ್ಳುತ್ತಿವೆ. ರೋಗಗ್ರಸ್ತ ಕಾರ್ಖಾನೆಗಳನ್ನು ಪುನ:ಶ್ಚೇತನಗೊಳಿಸಲು ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ:ಸಿಐ 167 ಎಸ್‌ಪಿಐ 2001 ಬೆಂಗಳೂರು ದಿನಾಂಕ 25.09.2002 ಮತ್ತು ಸಿಐ 406 ಎಎಸ್‌ಪಿಐ 206 (ಪಿ1) ಬೆಂಗಳೂರು ದಿನಾಂಕ 22/1/2007 ರನ್ವಯ ಕೆಳಗಿನ ರಿಯಾಯಿತಿ ಮತ್ತು ಸವಲತ್ತುಗಳನ್ನು ಕಲ್ಪಿಸಲು ಆದೇಶ ಹೊರಡಿಸಿರುತ್ತದೆ. **1. ಬೀಜ ಧನ ಸಾಲ** ಘಟಕದ ಪುನ:ಶ್ಚೇತನ ಯೋಜನಾ ವೆಚ್ಚದ ಶೇ.25 ರಷ್ಟು ಹಣವನ್ನು ಗರಿಷ್ಟ ರೂ.2.50 ಲಕ್ಷಗಳ ಮಿತಿಗೊಳಪಟ್ಟು ಬಡ್ಡಿರಹಿತ ಬೀಜಧನವನ್ನು ಸಾಲದ ರೂಪದಲ್ಲಿ ಒದಗಿಸುವುದು. **2. ಕೆ.ಪಿ.ಟಿ.ಸಿ.ಎಲ್ / ವಿದ್ಯುತ್ ಸರಬರಾಜು ಕಂಪನಿಗಳಿಂದ ಪರಿಹಾರ:**

		• ಮುಚ್ಚುವ ಅವಧಿಯಲ್ಲಿ ಸ್ಥಿರ ಶುಲ್ಕಗಳು/ ಬೇಡಿಕೆ ಶುಲ್ಕಗಳನ್ನು ವಿಧಿಸದಂತೆ ಕೆ.ಪಿ.ಟಿ.ಸಿ.ಎಲ್ / ವಿದ್ಯುತ್ ಸರಬರಾಜು ಕಂಪನಿಗಳಿಗೆ ಸೂಚಿಸಬಹುದು. • ಕೆ.ಪಿ.ಟಿ.ಸಿ.ಎಲ್ / ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಾಕಿ ಇರುವ ವಿದ್ಯುತ್ ಬಿಲ್‌ನ್ನು 6 ಅರ್ಧವಾರ್ಷಿಕ ಕಂತುಗಳಲ್ಲಿ ಶೇ 6% ಬಡ್ಡಿದರದಲ್ಲಿ ಪಾವತಿಸಲು ಅವಕಾಶ • ಕೆ.ಪಿ.ಟಿ.ಸಿ.ಎಲ್ / ವಿದ್ಯುತ್ ಸರಬರಾಜು ಕಂಪನಿಗಳು ರೋಗಗ್ರಸ್ಥ ಕೈಗಾರಿಕೆ ಮುಚ್ಚುವ ಅವಧಿಗೆ ಬಡ್ಡಿ ವಿಧಿಸುವುದಿಲ್ಲ. **3. ಕೆಐಎಡಿಬಿ/ ಕೆಎಸ್‌ಎಸ್‌ಐಡಿಸಿ ಮತ್ತು ಕಿಯೋನಿಕ್ಸ್‌ಗಳ ಬಾಕಿ ಸಾಲದ ಮರುಹಂಚಿಕೆ:** ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ ಮತ್ತು ಕಿಯೋನಿಕ್ಸ್‌ಗಳ ಬಾಕಿ ಸಾಲ ಪಾವತಿಯನ್ನು ಒಂದು ವರ್ಷ ಋಣಸ್ಥಗಿತದೊಂದಿಗೆ (moratorium) ಮುಂದೂಡಿ ಅದನ್ನು ನಾಲ್ಕು ವಾರ್ಷಿಕ ಕಂತುಗಳಲ್ಲಿ ಬಡ್ಡಿರಹಿತವಾಗಿ ಪಾವತಿಸಲು ಅವಕಾಶ. **4. ಅಭಿವೃದ್ಧಿ ಸಾಲದ ಮರು ಹಂಚಿಕೆ** ಅಭಿವೃದ್ಧಿ ಸಾಲ ಮರುಪಾವತಿಯನ್ನು ಕೈಗಾರಿಕೆಯು ಪುನಃಶ್ಚೇತನಗೊಳಿಸಿದ ನಂತರ ಮೂರು ವರ್ಷದ ಅವಧಿಯಲ್ಲಿ ಬಡ್ಡಿ ಇಲ್ಲದೇ ಪಾವತಿಸಲು ಅವಕಾಶ. **5. ತೆರಿಗೆ ಸಂಬಂಧಿತ ಸೌಲಭ್ಯಗಳು:** ತೆರಿಗೆ ಬಾಕಿಯನ್ನು 6 ಅರ್ಧ ವಾರ್ಷಿಕ ಕಂತುಗಳಲ್ಲಿ ಪ್ರತಿ ತಿಂಗಳಿಗೆ ಶೆ.1/2ರಂತೆ ಬಡ್ಡಿಸಹಿತ ಮರುಪಾವತಿ ಹಾಗೂ ಮುಂದಿನ ಮೂರು ವರ್ಷಗಳಲ್ಲಿ ಪಾವತಿಸುವ ಮಾಹೆಯ ತೆರಿಗೆಯಲ್ಲಿ ಶೆ.50ರಷ್ಟು ಬಡ್ಡಿರಹಿತವಾಗಿ ಮುಂದೂಡಿ ನಂತರ 3 ವಾರ್ಷಿಕ ಕಂತುಗಳಲ್ಲಿ ಆಯಾ ಸಾಲಿನ ತೆರಿಗೆ ಜೊತೆಯಲ್ಲಿ ಮರುಪಾವತಿ ಮಾಡಲು ಅವಕಾಶ ನೀಡಲಾಗಿದೆ ಮತ್ತು ಘಟಕವು ಮುಚ್ಚಿರುವ ಅವಧಿಗೆ ಬಡ್ಡಿಯನ್ನು ವಿಧಿಸುವಂತಿಲ್ಲ.

ಸಿಐ 03 ಸಿಎಸ್‌ಸಿ 2021

(ಸಿ.ಸಿ. ಪಾಟೀಲ್)
ಸಣ್ಣ ಕೈಗಾರಿಕೆ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.